ಖಾಸಗಿ ವಾಹನಗಳು ಅನುಮತಿ ಪಡೆದ ಸ್ಥಳಗಳಲ್ಲಿ ಓಡಿಸದೆ ಇರುವ ಬಗ್ಗೆ.

624. ಶ್ರೀ ಅಂಜನಮೂರ್ತಿ, (ನೆಲಮಂಗಲ):– ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಬೆಂಗಳೂರಿನಿಂದ ಕೆಲವು ಖಾಸಗಿ ವಾಹನಗಳನ್ನು ನೆಲಮಂಗಲ ಕ್ಷೇತ್ರದ ಮೂಲಕ ಓಡಿಸಲು ಅನುಮತಿ ಪಡೆದಿದ್ದರೂ ಸಹ ಆ ವಾಹನಗಳನ್ನು ಬೇರೆ ಮಾರ್ಗವಾಗಿ ಓಡಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಆ) ಶ್ರೀ ಲಕ್ಷ್ಮೀನಾರಾಯಣ ಮೋಟಾರು ಸರ್ವೀಸ್ ಎಂಬ ಖಾಸಗಿ ವಾಹನವು ಬೆಂಗಳೂರಿನಿಂದ ಹೆಬ್ಬೂರ್‌ವರೆಗೆ ಯಾವ ಯಾವ ಹಳ್ಳಿಗಳ ಮೂಲಕ ಓಡಿಸಲು ಅನುಮತಿ ಪಡೆದಿದೆ ?

ಇ) ಅನುಮತಿ ಪಡೆದ ಮಾರ್ಗದಲ್ಲಿ ಓಡಿಸದೆ ಇರುವ ವಾಹನಗಳ ಮಾಲೀಕರ ಮೇಲೆ ಸರ್ಕಾರವು ಕೈಗೊಂಡಿರುವ ಕ್ರಮಗಳೇನು ?

ಶ್ರೀ ಭೀಮಣ್ಣ ಖಂಡ್ರೆ (ಸಾರಿಗೆ ಸಚಿವರು):–

ಅ) ಬಂದಿದೆ.

ಆ) ಎಂ.ಇ.ಡಿ. 2385 ವಾಹನವು ಹೆಬ್ಬೂರಿನಿಂದ ಬೆಂಗಳೂರಿಗೆ ಸುಗ್ಗನಹಳ್ಳಿ, ಕುದೂರು, ಶಿವಗಂಗೆ, ಜೆ.ಎಂ. ಹಳ್ಳಿ, ಮೋಟಗಾನಹಳ್ಳಿ, ಸೊಂಡೆಕೊಪ್ಪ, ತಾವರೆಕೆರೆ ಮಾರ್ಗವಾಗಿ ದಿನಕ್ಕೆ ನಾಲ್ಕು ಬಾರಿ ಓಡಾಡಲು ಪರವಾನಗಿ ಹೊಂದಿದೆ. ಅದರ ಪರ್ಮಿಟ್ ಸಂಖ್ಯೆ: ಪಿಎಸ್‌ಟಿಪಿ:2:84–85, ದಿನಾಂಕ:11.4.95ರವರೆಗೆ ಚಾಲ್ತಿಯಲ್ಲಿರುತ್ತದೆ.

ಇ) ಮೋಟಾರು ವಾಹನ ಅಧಿನಿಯಮ 1988ರ ಕಾಯಿದೆ 86ರ ಪ್ರಕಾರ ಅನುಮತಿ ಪಡೆಯದೆ ಇರುವ ಮಾರ್ಗಗಳಲ್ಲಿ ಓಡಿಸಲಾದ ಬಸ್ಸುಗಳ ವಿರುದ್ಧ ಸಂಬಂಧಪಟ್ಟ ಪ್ರಾದೇಶಿಕ ಸಾರಿಗೆ ಪ್ರಾಧಿಕಾರವು ಪರವಾನಗಿಯನ್ನು ಅಮಾನತ್ತಿನಲ್ಲಿಡುವುದು ಅಥವಾ ರದ್ದು ಪಡಿಸುವುದು ಅಥವಾ ದಂಡ ವಿಧಿಸುವುದು ಮುಂತಾದ ಕ್ರಮ ತೆಗೆದುಕೊಳ್ಳುತ್ತದೆ.

ಹರಪ್ಪನ ಹಳ್ಳಿಯಲ್ಲಿ ಕೆ.ಎಸ್.ಆರ್.ಟಿ.ಸಿ. ಬಸ್ ನಿಗದಿತ ವೇಳೆಗೆ ಸಂಚರಿಸದಿರುವುದರಿಂದ ತೊಂದರೆ.

663. ಶ್ರೀ ಬಿ.ಹೆಚ್. ಯಂಕಾನಾಯಕ (ಹರಪ್ಪನಹಳ್ಳಿ):– ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯ ಬಸ್ಸುಗಳು ಹರಪ್ಪನಹಳ್ಳಿ ತಾಲ್ಲೂಕಿನಲ್ಲಿ ಸಕಾಲದಲ್ಲಿ ಬಾರದೆ ಇರುವುದರಿಂದ ತೊಂದರೆಯಾಗುತ್ತಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೆ ?

ಆ) ಹಾಗಿದ್ದಲ್ಲಿ ಈ ತೊಂದರೆ ನಿವಾರಣೆಗೆ ಸರ್ಕಾರವು ಕೈಗೊಂಡ ಕ್ರಮಗಳೇನು ?

ಇ) ದಾವಣಗೆರೆ, ಹಡಗಲಿ, ಬಳ್ಳಾರಿ ಡಿಪೋಗಳಿಂದ ಸಂಚಾರ ಮಾಡುತ್ತಿರುವ ಬಸ್ಸುಗಳು ಸರಿಯಾದ ವೇಳೆಗೆ ಸಕಾಲದಲ್ಲಿ ಸಂಚರಿಸುವಂತೆ ಮಾಡಲು ಸರ್ಕಾರವು ಕ್ರಮ ಕೈಗೊಳ್ಳುವುದೆ ?

ಶ್ರೀ ಭೀಮಣ್ಣ ಖಂಡ್ರೆ (ಸಾರಿಗೆ ಸಚಿವರು):–

ಅ) – ಹೌದು –